# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 601 |
| 2 | ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | : | 14/08/2025 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಗಳಲ್ಲಿ 371 ಜೆ ನಿಯಮಗಳು ಜಾರಿಗೊಳಿಸುವಲ್ಲಿ ವಿಶೇಷವಾಗಿ ಪ್ರಾದೇಶಿಕ ಸ್ಥಳೀಯ ವೃಂದವನ್ನು ಸರಿಯಾಗಿ ರಚಿಸದೆ ಇರುವುದರಿಂದ ಈ ಭಾಗದ ನಿರುದ್ಯೋಗಿ ಯುವಕರಿಗೆ ಉದ್ಯೋಗದಲ್ಲಿ ಮತ್ತು ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಮುಂಬಡ್ತಿಯಲ್ಲಿ<br>ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು: | ಭಾರತದ ಸಂವಿಧಾನದ ಅನುಚ್ಛೇದ 371(ಜೆ) ಅನುಷ್ಠಾನಕ್ಕೆ ಸರ್ಕಾರವು 371(ಜೆ) ಕುರಿತಂತೆ ಹೊರಡಿಸಲಾದ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ-ಕರ್ನಾಟಕ ಪ್ರವೇಶಕ್ಕೆ ನೇಮಕಾತಿ ಯಲ್ಲಿ ಮೀಸಲಾತಿ) ಆದೇಶ 2013ರ ಕಂಡಿಕೆ 5 ರನ್ವಯ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳು ಗುರುತಿಸುವ ಮತ್ತು ಭರ್ತಿ ಮಾಡುವಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಕಾಲಕಾಲಕ್ಕೆ ಹೊರಡಿಸಿರುವ ಸುತ್ತೋಲೆಗಳಲ್ಲಿ ನೀಡಿರುವ ನಿರ್ದೇಶನಗಳ ಅನುಸಾರ ಕೆ.ಎಸ್.ಐ.ಎಸ್.ಎಫ್ ಘಟಕದ ಪ್ರತಿಯೊಂದು ಹುದ್ದೆಯಲ್ಲಿ ಸ್ಥಳೀಯ ವೃಂದ ಮತ್ತು ಸ್ಥಳೀಯೇತರ ವೃಂದಗಳೆಂದು ಈ ಕೆಳಗಿನಂತೆ ಪ್ರತ್ಯೇಕ ವೃಂದಗಳಡಿ ಗುರುತಿಸಿ ಮುಂಬಡ್ತಿ ಹುದ್ದೆಗಳನ್ನು ಭರ್ತಿ ಮಾಡಲಾಗಿರುತ್ತದೆ:-<br><br>ಹುದ್ದೆ / ಸ್ಥಳಿಯ ವೃಂದ / ಸ್ಥಳೀಯೇತರ ವೃಂದ:<br>ಸಹಾಯಕ ಕಮಾಂಡೆಂಟ್ – 4 – 20<br>ಪಿಐ – 6 – 66<br>ಪಿ.ಎಸ್.ಐ – 6 – 195<br>ಎ.ಎಸ್.ಐ – 30 – 348<br>ಹೆಚ್.ಸಿ – 37 – 428<br>ಪಿ.ಸಿ – 138 – 1593<br><br>ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಗಳಲ್ಲಿನ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಅಣು ಸ್ಥಾವರಗಳ ಭದ್ರತೆಗೆ ಮಂಜೂರಾಗಿರುವ ಹುದ್ದೆಗಳಲ್ಲಿ "ಕೆಎಸ್‌ಐಎಸ್‌ಎಫ್ ನ ವಿಶೇಷ ಕಾರ್ಯ ವೈಖರಿಯನ್ನು ಪರಿಗಣಿಸಿ, ಕಲ್ಯಾಣ ಕರ್ನಾಟಕ ವಿಭಾಗದ ಸೂಕ್ಷ್ಮ ಸ್ಥಾವರಗಳಿಗೆ ಹಂಚಿಕೆಯಾಗುವ ಹುದ್ದೆಗಳಿಗೆ ಅನುಗುಣವಾಗಿ ಮೀಸಲಾತಿ ನಿಗಧಿಪಡಿಸಿ ಹಾಗೂ ಈ ಸಂಖ್ಯೆಯಲ್ಲಿ ಬದಲಾವಣೆಯಾದಾಗ ಅದಕ್ಕನುಗುಣವಾಗಿ ಕಲ್ಯಾಣ ಕರ್ನಾಟಕ ಮೀಸಲಾತಿಯನ್ನು ಪರಿಷ್ಕರಿಸಿ ತಿದ್ದುಪಡಿ ಅಧಿಸೂಚನೆಯನ್ನು ಹೊರಡಿಸಿ ಅದರನ್ವಯ ಕೆಎಸ್‌ಐಎಸ್‌ಎಫ್ ನ ಎಲ್ಲಾ ವೃಂದಗಳಿಗೆ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದದ ವರ್ಗೀಕರಣ ಮಾಡಿ ನೇಮಕಾತಿ/ಬಡ್ತಿ ನೀಡಲು ಸೂಕ್ತ ಕ್ರಮ ವಹಿಸಲಾಗುತ್ತಿದೆ. ಈ ಹಿನ್ನಲೆಯಲ್ಲಿ ಕಲ್ಯಾಣ ಕರ್ನಾಟಕ ಪ್ರಾದೇಶಿಕ |

<table>
<tr>
<td></td>
<td></td>
<td>ವೃಂದಗಳನ್ನು ಗುರುತಿಸಲಾದ ಹುದ್ದೆಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಗುರುತಿಸಲಾಗಿರುತ್ತದೆ:-
<table>
<tr><th>ಹುದ್ದೆ</th><th>ಸ್ಥಳಿಯ ವೃಂದ</th><th>ಸ್ಥಳೀಯೇತರ ವೃಂದ</th></tr>
<tr><td>ಸಹಾಯಕ ಕಮಾಂಡೆಂಟ್</td><td>4</td><td>20</td></tr>
<tr><td>ಪಿಐ</td><td>8</td><td>64</td></tr>
<tr><td>ಪಿ.ಎಸ್.ಐ</td><td>6</td><td>195</td></tr>
<tr><td>ಎ.ಎಸ್.ಐ</td><td>56</td><td>322</td></tr>
<tr><td>ಹೆಚ್.ಸಿ</td><td>79</td><td>386</td></tr>
<tr><td>ಪಿ.ಸಿ</td><td>138</td><td>1593</td></tr>
</table>
</td>
</tr>
<tr>
<td>ಆ)</td>
<td>ರಾಜ್ಯ ಕೈಗಾರಿಕಾ ಭದ್ರತಾ ಪಡೆಯು ಪ್ರಸ್ತುತ ಕಲ್ಯಾಣ ಕರ್ನಾಟಕ ಪ್ರದೇಶದ ಎಷ್ಟು ಸೂಕ್ಷ್ಮ ಸ್ಥಾವರಗಳಿಗೆ ಭದ್ರತೆ ಒದಗಿಸುತ್ತಿದೆ: ಮತ್ತು ಪ್ರಸ್ತುತ ಎಷ್ಟು ಸೂಕ್ಷ್ಮ ಸ್ಥಾವರಗಳಿಂದ ಭದ್ರತೆಗೆ ಬೇಡಿಕೆಗಳು ಬಂದಿವೆ: (ವಿವರಣೆ ನೀಡುವುದು)</td>
<td>ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಗಳಿಂದ ಕಲ್ಯಾಣ ಕರ್ನಾಟಕದ ಪ್ರದೇಶದ ಈ ಕೆಳಕಂಡ ಸೂಕ್ಷ್ಮ ಸ್ಥಾವರಗಳಿಗೆ ಭದ್ರತೆಯನ್ನು ಒದಗಿಸಲಾಗುತ್ತಿದೆ:-
<table>
<tr><th>ಕ್ರ. ಸಂ</th><th>ಸೂಕ್ಷ್ಮ ಸ್ಥಾವರ</th><th>ಘಟಕದ ವ್ಯಾಪ್ತಿ</th></tr>
<tr><td>1</td><td>ಕೇಂದ್ರ ಕಾರಾಗೃಹ ಬಳ್ಳಾರಿ</td><td rowspan="4">2ನೇ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಶಿವಮೊಗ್ಗ.</td></tr>
<tr><td>2</td><td>ಬಿ.ಟಿ.ಪಿ.ಎಸ್. ಕುಡುತಿನಿ</td></tr>
<tr><td>3</td><td>ತುಂಗಭದ್ರಾ ಜಲಾಶಯ</td></tr>
<tr><td>4</td><td>ಜಿಂದಾಲ್ ವಿಮಾನ ನಿಲ್ದಾಣ</td></tr>
<tr><td>5</td><td>ಕಲಬುರಗಿ ವಿಮಾನ ನಿಲ್ದಾಣ</td><td rowspan="4">3ನೇ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಧಾರವಾಡ</td></tr>
<tr><td>6</td><td>ಕಲಬುರಗಿ ಹೈಕೋರ್ಟ್ ಪೀಠ</td></tr>
<tr><td>7</td><td>ಬೀದರ್ ವಿಮಾಣ ನಿಲ್ದಾಣ</td></tr>
<tr><td>8</td><td>ಕಲಬುರಗಿ ಕೇಂದ್ರ ಕಾರಾಗೃಹ</td></tr>
</table>
ಮೇಲ್ಕಾಣಿಸಿದ ಕಲ್ಯಾಣ ಕರ್ನಾಟಕ ಪ್ರದೇಶದ ಸೂಕ್ಷ್ಮ ಸ್ಥಾವರಗಳನ್ನು ಹೊರತುಪಡಿಸಿ, ಪ್ರಸ್ತುತ ಕಲ್ಯಾಣ ಕರ್ನಾಟಕ ಪ್ರದೇಶದ ಇನ್ನಿತರ ಯಾವುದೇ ಸೂಕ್ಷ್ಮ ಸ್ಥಾವರಗಳ ಭದ್ರತೆಗೆ ಬೇಡಿಕೆಗಳು ಸ್ವೀಕೃತವಾಗಿರುವುದಿಲ್ಲ.</td>
</tr>
<tr>
<td>ಇ)</td>
<td>ಪೊಲೀಸ್ ಮಹಾ ನಿರ್ದೇಶಕರು ಆಂತರಿಕಾ ಭದ್ರತಾ ವಿಭಾಗ ರವರು ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ ಜಿಲ್ಲೆಯಲ್ಲಿ ಒಂದು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯನ್ನು ಸೃಜಿಸುವ ಪ್ರಸ್ತಾವನೆಯನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ಪ್ರಸ್ತಾವನೆಯ ವಿವರ ನೀಡುವುದು).</td>
<td>ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ ಕಲಬುರಗಿ ಜಿಲ್ಲೆಯಲ್ಲಿ ಒಂದು ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯನ್ನು ಒಟ್ಟು.1,192 ಹುದ್ದೆಗಳೊಂದಿಗೆ ಸೃಜಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.</td>
</tr>
</table>

ಸಂಖ್ಯೆ: ಒಇ 198 ಪಿಇಎಂ 2025

**(ಡಾ: ಜಿ ಪರಮೇಶ್ವರ)**

ಗೃಹ ಸಚಿವರು